ಉ) ಪ್ರತಿ ವರ್ಷದ ನೀರಾವರಿ ಹಂಗಾಮುಗಳಲ್ಲಿ ರೈತರಿಗೆ ಸಮರ್ಪಕ ನೀರಾವರಿಗಾಗಿ ನೀರಿನ ಸೌಕರ್ಯ ಒದಗಿಸಲು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

512(554) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ರೇಷ್ಮೆ ಇಲಾಖೆಯು 29 ಎಕರೆ ಜಮೀನುಳ್ಳ ಬೃಹತ್ ಫಾರಂ ಹೊಂದಿದ್ದು ಮತ್ತು 20 ಜನ ನೌಕರರು ಇದ್ದು ಅಲ್ಲಿ ಸುವ್ಯವಸ್ಥೆಯಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಮಲಪ್ರಭಾ ಜಲಾಶಯದಿಂದ ಪಂಪ್‌ಸೆಟ್ ಮುಖಾಂತರ ರೇಷ್ಮೆ ಕೃಷಿಗೆ ನೀರನ್ನು ಒದಗಿಸಲು ಈಗಾಗಲೇ ಅಂದಾಜು ಪತ್ರಿಕೆ ತಯಾರಾಗಿದ್ದು ಅನುಮೋದನೆ ದೊರೆತಿದ್ದರೂ ಸಹ ಈವರೆವಿಗೆ ಕಾರ್ಯರೂಪಕ್ಕೆ ಬಾರದಿರಲು ಕಾರಣವೇನು,

ಇ) ಹಾಗಿದ್ದಲ್ಲಿ, ಮಲಪ್ರಭಾ ಜಲಾಶಯದಿಂದ ಪಂಪ್‌ಸೆಟ್ ಮುಖಾಂತರ ರೇಷ್ಮೆ ಕೃಷಿಗೋಸ್ಕರ 29 ಎಕರೆ ಜಮೀನಿಗೆ ನೀರು ಪೂರೈಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಎಸ್ ಶಿವಣ್ಣ (ರೇಷ್ಮೆ ಸಚಿವರು)

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ರೇಷ್ಮೆ ಕೃಷಿ ಕ್ಷೇತ್ರದ ಒಟ್ಟು ವಿಸ್ತೀರ್ಣ 31 10 ಎಕರೆಗಳು ಈ ಕೃಷಿ ಕ್ಷೇತ್ರದಲ್ಲಿ 2 'ಸಿ' ಗುಂಪಿನ ಮತ್ತು 3 'ಡಿ' ದರ್ಜೆಯ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ ಈ ಕೃಷಿ ಕ್ಷೇತ್ರಕ್ಕೆ ನೀರಿನ ಸೌಲಭ್ಯ ಇಲ್ಲದ ಕಾರಣ ಮಲಪ್ರಭಾ ನದಿಯಿಂದ ಪೈಪ್‌ಲೈನ್ ಮೂಲಕ ನೀರಾವರಿ ಸೌಲಭ್ಯವನ್ನು ಪಡೆಯಲು ನಬಾರ್ಡಿನ ಆರ್ ಐ ಡಿ ಎಫ್ ಯೋಜನೆಯಡಿ ಪ್ರಸ್ತಾವನೆ ಸಲ್ಲಿಸಲಾಗಿದೆ

ಆ) ಈ ಕಾರ್ಯಕ್ರಮಕ್ಕೆ ರೂ 40 20 ಲಕ್ಷಗಳ ಅಂದಾಜು ತಯಾರಿಸಿದ್ದು, ಕಾರ್ಯಕ್ರಮದ ಅನುಷ್ಠಾನಕ್ಕೆ ನಬಾರ್ಡ್ ಸಂಸ್ಥೆಗೆ ಈ ಪ್ರಸ್ತಾವನೆ ಕಳುಹಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ

ಇ) ರೇಷ್ಮೆ ಇಲಾಖೆಗೆ ಸಂಬಂಧಿಸಿದ 23 ಕಾಮಗಾರಿಗಳನ್ನು ಆರ್‌ಐಡಿಎಫ್ ಯೋಜನೆಯಡಿ ಪ್ರಸ್ತಾಪಿಸಿದ್ದು, ಇದರಲ್ಲಿ ಸವದತ್ತಿ ರೇಷ್ಮೆ ಕೃಷಿ ಕ್ಷೇತ್ರಕ್ಕೆ ಮಲಪ್ರಭಾ ನದಿಯಿಂದ ಪೈಪ್‌ಲೈನ್ ಮುಖಾಂತರ ನೀರು ಒದಗಿಸುವ ಕಾರ್ಯಕ್ರಮವೂ ಸೇರಿದೆ

513(949) ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ (ಉಚ್ಚಗಾಂವ್) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಉಚ್ಚಂಗಾವ್ ಮತಕ್ಷೇತ್ರದಲ್ಲಿ ಮರಾರಿ ಮಾಧ್ಯಮದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಇವೆಯೇ,

ಆ) ಬೆಳಗಾಂವ ಕ್ಷೇತ್ರ ಶಿಕ್ಷಣಾಧಿಕಾರಿಗಳು (ಗ್ರಾಮಾಂತರ ಮತ್ತು ನಗರ) ಮರಾರಿ ಮಾಧ್ಯಮದಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಯಾವುದಾದರೂ ಹೊಸ ಪ್ರಸ್ತಾವನೆಗಳನ್ನು ಕಳುಹಿಸಿದ್ದಾರೆಯೇ, (ಕಳುಹಿಸಿದ್ದರೆ ವಿವರ ನೀಡಿ)

ಇ) ಉಚ್ಚಂಗಾವ್ ಮತಕ್ಷೇತ್ರಕ್ಕೆ ಮಂಜೂರಾಗಿರುವ ಮರಾರಿ ಮಾಧ್ಯಮದ ಪ್ರೌಢಶಾಲೆಗಳ ಸಂಖ್ಯೆ ಎಷ್ಟು, (ವಿವರ ನೀಡಿ)?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಹೌದು

ಆ) ಹೌದು ಬೆಳಗಾಂನ ಅಂಗೋಲ ಮತ್ತು ವಡಗಾಂವ್‌ನಲ್ಲಿ ಮರಾರಿ ಮಾಧ್ಯಮದಲ್ಲಿ 02 ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಸ್ತಾವನೆಗಳನ್ನು ಕಳುಹಿಸಿರುತ್ತಾರೆ

ಇ) ಮರಾರಿ ಮಾಧ್ಯಮದ ಒಂದು ಸರ್ಕಾರಿ ಪ್ರೌಢಶಾಲೆಯನ್ನು 1998ರಲ್ಲಿ ಬೆಳಗಾಂ ತಾಲ್ಲೂಕಿನ ಕಲ್-ಚೋಲ್‌ನಲ್ಲಿ ಮಂಜೂರು ಮಾಡಲಾಗಿದೆ